ಓಎಸ್. ನಂ.169/2022
ಪಿ.ಡಬ್ಲ್ಯೂ : 1

**ದಿನಾಂಕಃ 18.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು : ಪ್ರತಿವಾದಿಯರ ಪರ ಬಿಡಿಎ ವಕೀಲರಿಂದಃ**

ನಮ್ಮ ಮಾವನವರ ಕುಟುಂಬಕ್ಕೆ 7 ಎಕರೆ 9 ಗುಂಟೆ ಜಮೀನು ಇದೆ. ಇದು ಒಂದೇ ಸರ್ವೆ ನಂಬರ ನಲ್ಲಿ ಜಮೀನು ಇದೆ. ನನ್ನ ಮಾವನವರ ಹೆಸರಿನಲ್ಲಿ ಆಗುವ ಪೂರ್ವದಲ್ಲಿ ನನ್ನ ಗಂಡನ ತಾತನ ಹೆಸರಿನಲ್ಲಿ ಇತ್ತು. ನನ್ನ ಗಂಡನ ತಾತನಿಗೆ ಎಷ್ಟು ಜನ ಮಕ್ಕಳು ಅಂತ ನನಗೆ ಗೊತ್ತಿಲ್ಲ. ನನ್ನ ಗಂಡನ ತಾತನಿಗೆ ಎಷ್ಟು ಜನ ಹೆಣ್ಣು ಮಕ್ಕಳು ಅಂತ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ 3 ಜನ ಅಣ್ಣ ತಮ್ಮಂದಿರು ಹಾಗೂ 3 ಜನ ಅಕ್ಕ ತಂಗಿಯರು. ಅವರ ಅಕ್ಕತಂಗಿಯರೆಂದರೆ, 1 ಅಂಬಿಬಾಯಿ, 2 ಕಮಲಾಬಾಯಿ ಹಾಗೂ ಲಕ್ಷ್ಮಿಂಬಾಯಿ, ಇವರ ಜೀವಂತರಿದ್ದಾರೆ. ನಮ್ಮ ಮಾವ ಆಸ್ತಿಯಲ್ಲಿ ಭಾಗಮಾಡಿಕೊಟ್ಟಿರುವುದಿಲ್ಲ. ಈ ದಾವಾ ಜಮೀನಿನಲ್ಲಿ ನನ್ನ ಮಾವನ ಎಲ್ಲಾ ಮಕ್ಕಳಿಗೂ ಭಾಗ ಇದೆ ಎಂದರೆ ಸರಿ. ನನ್ನ ಗಂಡನ ಸಹೋದರಿಯರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ದಾವಾ ಜಮೀನು ನೀರಾವರಿ ಜಮೀನು ಇದೆ. ಈ ಜಮೀನಿನಲ್ಲಿ ಭತ್ತ ಬೆಳೆಯುತ್ತಾರೆ. ದಾವಾ ಜಮೀನಿನ ಪಹಣಿಗಳಲ್ಲಿ ನಮೂದಿಸಿರುವ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸರಿ. ನನ್ನ ಮದುವೆಯಾಗಿ 20 ವರ್ಷಗಳಾದವು. ನನ್ನ ಮದುವೆಯಾಗುವಾಗ ನನ್ನ ವಯಸ್ಸು 12 ವರ್ಷ ವಯಸ್ಸು ಇತ್ತು. ನನ್ನ ಮದುವೆಯಾಗುವ ಪೂರ್ವದಲ್ಲಿ ನನ್ನ ಗಂಡನ ಇಬ್ಬರು ಸಹೋದರಿಯರ ಮದುವೆಯಾಗಿತ್ತು. ನಾನು ಗಂಡನ ಮನೆಗೆ ಹೋದ ನಂತರ ಇನ್ನೊಬ್ಬಳ ಮದುವೆ ಮಾಡಿದ್ದೇವೆ.

ದಾವಾ ಜಮೀನಿನಲ್ಲಿ ಎಷ್ಟು ಬೆಳೆ ಬೆಳೆಯುತ್ತಾರೆ ಅಂತ ನನಗೆ ಗೊತ್ತಿಲ್ಲ. ಅದರ ಆದಾಯ ಎಷ್ಟು ಅಂತ ನನಗೆ ಗೊತ್ತಿಲ್ಲ. ದಾವಾ ಜಮೀನಿನಲ್ಲಿ ಭತ್ತ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನಿಗೆ 80 ವರ್ಷ ವಯಸ್ಸಾಗಿದೆ ಎಂದರೆ ಸರಿ. ನಾನು ನನ್ನ ಗಂಡ ದುಡಿಯಲು ಹೋಗಿದ್ದೇವು. ಅಲ್ಲಿ ದುಡಿದದ್ದು ನಮ್ಮ ಉಪಜೀವನಕ್ಕೆ ಮಾತ್ರ ಸಾಲುತ್ತಿತ್ತು ಎಂದರೆ ಸರಿ. ಪ್ರತಿವಾದಿ-3 ಮತ್ತು 4 ರವರು ದುಡಿದದ್ದು ನಮ್ಮ ಸಂಸಾರಕ್ಕೆ ಮಾತ್ರ ಸಾಕಾಗುತ್ತಿತ್ತು ಎಂದರೆ ಸರಿ. ಪ್ರತಿವಾದಿ-1 ಮಕ್ಕಳ ಮದುವೆಗೆ ಸಾಲ ಮಾಡಿದ್ದಾನೆ ಎಂದರೆ ಸರಿಯಲ್ಲ.

ಈ ಸಾಲ ತೀರಿಸಲು ಪ್ರತಿವಾದಿ-5 ರವರಿಗೆ ದಾವಾ ಜಮೀನನ್ನು ಕ್ರಯದ ಕರಾರು ಮಾಡಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಎರಡೂವರೆ ಎಕರೆ ಜಮೀನು ಬರಬಹುದು. ನಾನು ನನ್ನ ಗಂಡನ ಜಮೀನಿನಲ್ಲಿ ಭಾಗ ಕೇಳಿದ್ದೇನೆ. ನನ್ನ ಮಾವ ಮಾಡಿದ ಸಾಲವನ್ನು ನನ್ನ ಗಂಡ ತೀರಿಸಿದರೆ ಆತನ ಭಾಗದ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ಭಾಗ ಹೋಗುತ್ತದೆ ಅಂತ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.